ನಾನೊಬ್ಬ ವಿಜ್ಞಾನಿ

ಮಾಲಾ ರಾಧಾಕೃಷ್ಣನ್ ಅವರೊಂದಿಗಿನ ಸಂದರ್ಶನ

ಮಾಲಾ ರಾಧಾಕೃಷ್ಣನ್ ಅವರು ಒಬ್ಬ ವಿಜ್ಞಾನಿ-ಕವಯಿತ್ರಿ ಹಾಗೂ ಅಮೆರಿಕಾದ ವೆಲ್ಲೆಸ್ಲಿ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕರು. ಅವರು ರಸಾಯನ ಶಾಸ್ತ್ರ-ವಸ್ತು ಆಧಾರಿತ ಕವಿತೆಗಳನ್ನು ಬರೆಯುತ್ತಾರೆ ಹಾಗೂ ವಾಚಿಸುತ್ತಾರೆ ಮತ್ತು ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಶಿಕ್ಷಣದಲ್ಲಿ ರಸಾಯನಶಾಸ್ತ್ರ ಮತ್ತು ಕವಿತೆಯನ್ನು ಹೇಗೆ ಒಟ್ಟುಗೂಡಿಸಬಹುದು ಎನ್ನುವುದರ ಕುರಿತು ಕೆಲವು ಒಳನೋಟಗಳನ್ನು ಅವರು ಈ ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ.

ಪ್ರಶ್ನೆ 1: ಮಾಲಾ, ತಾವು ಪ್ರಸ್ತುತ ಏನು ಮಾಡುತ್ತಿದ್ದೀರಿ ಎಂಬ ಬಗ್ಗೆ ಇನ್ನೊಂದು ಸ್ವಲ್ಪ ಹೇಳಬಹುದೇ?

ಮಾಲಾ: ಗಣಕೀಯ ಜೀವಭೌತವೈಜ್ಞಾನಿಕ ರಸಾಯನ–ವಿಜ್ಞಾನಿಯಾಗಿ (ಕಂಪ್ಯುಟೇಶನಲ್ ಬಯೊಫಿಸಿಕಲ್ ಕೆಮಿಸ್ಟ್) ನಾನು ಮತ್ತು ನನ್ನ ವಿದ್ಯಾರ್ಥಿಗಳು ಅಣುಗಳ ʻಸಂಬಂಧ ಬೆಸೆಯುವವರʼ ಪಾತ್ರವನ್ನು ನಿರ್ವಹಿಸುತ್ತಿದ್ದೇವೆ ಎಂದು ಹೇಳಿಕೊಳ್ಳಲು ಬಯಸುತ್ತೇವೆ–ನಾವು ಭೌತವಿಜ್ಞಾನ ಆಧಾರಿತ ಮಾದರಿಗಳನ್ನು ಉಪಯೋಗಿಸಿ ಅಣುಗಳು ಒಂದು ಇನ್ನೊಂದರ ಜೊತೆ ಎಷ್ಟು ಪ್ರಬಲವಾಗಿ ಅಂತರ್ ಕ್ರಿಯೆಯಲ್ಲಿ ತೊಡಗಿಕೊಳ್ಳುತ್ತವೆ ಎಂಬುದನ್ನು ಮುಂದಾಗಿಯೇ ಹೇಳಲು ಇಚ್ಛಿಸುತ್ತೇವೆ. ಈ ಮುನ್ಸೂಚನೆಗಳನ್ನು ಉಪಯೋಗಿಸಿಕೊಂಡು ಔಷಧಿಯ ಅಣುಗಳನ್ನು ಅಥವಾ ಇನ್ಯಾವುದೇ ಜೀವವೈಜ್ಞಾನಿಕ ಪ್ರಾಮುಖ್ಯತೆಯಿರುವ ಅಣುಗಳನ್ನು ವಿಶ್ಲೇಷಿಸಬಹುದು ಅಥವಾ ವಿನ್ಯಾಸಗೊಳಿಸಬಹುದು. ನಾನೂ ಸಹ ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಅಂತರ್ ಶಿಸ್ತೀಯ ವಿಜ್ಞಾನದಲ್ಲಿ ತೊಡಗಿಸಿಕೊಳ್ಳಲಿಕ್ಕಾಗಿ ನನ್ನ ಸಂಶೋಧನಾ ತಂಡದೊಂದಿಗೆ ಆಣ್ವಿಕ ಮಾದರಿಗಳನ್ನು ಸೃಷ್ಟಿಸುವ ಚಟುವಟಿಕೆಗಳಲ್ಲಿ ಕೆಲಸ ಮಾಡುತ್ತಿದ್ದೇನೆ.

ನಾನು ಪರಿಚಯಾತ್ಮಕ ರಸಾಯನವಿಜ್ಞಾನದಿಂದ ಹಿಡಿದು ಭೌತವಿಜ್ಞಾನ ಮತ್ತು ಗಣಕೀಯ ರಸಾಯನ–ವಿಜ್ಞಾನದವರೆಗೂ ವೈವಿಧ್ಯಮಯ ವ್ಯಾಪ್ತಿಯ ವಿಭಿನ್ನ ಕೋರ್ಸುಗಳನ್ನು ಬೋಧಿಸುತ್ತಿದ್ದೇನೆ. ವಿಭಿನ್ನ ಶಿಸ್ತುಗಳಿಗೆ ಚಾಚಿಕೊಂಡಿರುವ ಮಾದರಿಗಳೊಂದಿಗೆ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ವಿಚಾರ ಸಂಕಿರಣವನ್ನೂ ಕಲಿಸುತ್ತಿದ್ದೇನೆ–ಅಲ್ಲಿ ಯಾವ ಮಾದರಿಗಳು ತತ್ವಶಾಸ್ತ್ರೀಯ, ಮನಃಶಾಸ್ತ್ರೀಯ ಮತ್ತು ವೈಜ್ಞಾನಿಕ ದೃಷ್ಟಿಕೋನಗಳಿಗೆ ಸೇರಿವೆ ಎಂಬುದನ್ನು ಗಮನಿಸಲಾಗುತ್ತದೆ. ಈ ಕೋರ್ಸು, ಮಾನವಿಕ ವಿಜ್ಞಾನಗಳು, ಸಮಾಜವಿಜ್ಞಾನಗಳು ಮತ್ತು ಪ್ರಾಕೃತಿಕ ವಿಜ್ಞಾನಗಳನ್ನು ಒಂದರ ಜೊತೆ ಇನ್ನೊಂದರಂತೆ ಸೇರಿಸಿ ತನ್ಮೂಲಕ ಜಗತ್ತನ್ನು ಮತ್ತು ಅದರೊಂದಿಗೆ ನಮ್ಮ ಸಂಬಂಧವನ್ನು ಅರಿತುಕೊಳ್ಳುವ ಶಕ್ತಿಗೆ ಒತ್ತುಕೊಡುತ್ತದೆ. ನನ್ನ ವಿಜ್ಞಾನ ಸಂಬಂಧಿ ಕಾವ್ಯ ಸಹ ಸೃಜನಶೀಲತೆಯನ್ನು ಮತ್ತು ವಿಜ್ಞಾನವನ್ನು ಜೋಡಿಸುವ ನನ್ನ ಆಸಕ್ತಿಯಲ್ಲಿ ಬೇರುಗಳನ್ನು ಹೊಂದಿದೆ. ಪ್ರಸ್ತುತ ನಾನು ವಿಜ್ಞಾನ ವಿದ್ಯಾರ್ಥಿಗಳನ್ನು ಅವರು ತಮ್ಮ ವೈಜ್ಞಾನಿಕ ಯಾತ್ರೆಯ ಕುರಿತು ಚಿಂತಿಸುವಂತೆ ಕಾವ್ಯವನ್ನು ರಚಿಸುವುದರಲ್ಲಿ ತೊಡಗಿಸಿಕೊಳ್ಳುವುದರಲ್ಲಿ ಆಸಕ್ತಳಾಗಿದ್ದೇನೆ.

ಪ್ರಶ್ನೆ 2: ರಸಾಯನವಿಜ್ಞಾನದಲ್ಲಿನ ತಮ್ಮ ಆಸಕ್ತಿ ಯಾವಾಗ ಮತ್ತು ಹೇಗೆ ಶುರುವಾಯಿತು?

ಮಾಲಾ: ನನಗಿದ್ದ ಶಿಕ್ಷಕರಲ್ಲೆಲ್ಲಾ ನನ್ನ ಪ್ರೌಢಶಾಲೆಯ ರಸಾಯನ ವಿಜ್ಞಾನದ ಶಿಕ್ಷಕರು ಅತ್ಯಂತ ಉತ್ಸಾಹಿಗಳು. ಅವರಿಗೆ ಆ ವಿಷಯದಲ್ಲಿ ಒಂದು ರೀತಿಯ ಸಂಭ್ರಮೋತ್ಸಾಹವಿತ್ತು ಮತ್ತು ಅದರಲ್ಲಿನ ಸಂಭ್ರಮವನ್ನು ನಾವು ಕಾಣಬೇಕು ಎಂದು ಅವರು ಇಷ್ಟಪಡುತ್ತಿದ್ದರು. ನಿಮಗೆ ಯಾವುದರಲ್ಲೇ ಆಗಲಿ ಗಾಢ ಆಸಕ್ತಿ ಇದ್ದರೆ, ಅದನ್ನು ಪ್ರಾಮಾಣಿಕವಾಗಿ ಗುರುತಿಸಿ, ಅದನ್ನೇ ಅಪ್ಪಿಕೊಳ್ಳುವುದು ಮುಖ್ಯ ಎಂದು ನನಗನ್ನಿಸುತ್ತದೆ. ಮತ್ತು ಆ ಶಿಕ್ಷಕರು ಹಾಗೆ ಮಾಡುವುದೇ ಸರಿ ಎಂಬುದನ್ನು ನನಗೆ ಕಲಿಸಿದರು (ಬಹಳಷ್ಟು ರಸಾಯನವಿಜ್ಞಾನವನ್ನು ಕಲಿಸುವುದರ ಜೊತೆಯಲ್ಲೇ ಇದನ್ನೂ ಸಹ ಕಲಿಸಿದರು).

ಕೃಪೆ: ಸೊಹಿಲ್ ಪರೇಖ್. ಪರವಾನಗಿ ಹಕ್ಕನ್ನು ಹೊಂದಿದ ಮಾಲೀಕರ ಅನುಮತಿಯೊಂದಿಗೆ ಉಪಯೋಗಿಸಿಕೊಳ್ಳಲಾಗಿದೆ.

ಪ್ರಶ್ನೆ 3: ನಿಮಗೆ ಪದ್ಯಗಳನ್ನು ರಚಿಸಲು, ವಿಶೇಷವಾಗಿ ರಸಾಯನ ವಿಜ್ಞಾನದ ಮೇಲೆಯೇ ರಚಿಸಲು ಸ್ಫೂರ್ತಿ ಸಿಕ್ಕಿದ್ದು ಹೇಗೆ?

ಮಾಲಾ: ನನ್ನ ಪ್ರಯಾಣ ಆರಂಭವಾದದ್ದು ಕಾವ್ಯವಾಚನದ ಜಗತ್ತಿನಿಂದ. ಮುಕ್ತ ಕಾವ್ಯವಾಚನ, ಕವನ ರಚನಾ ಸ್ಪರ್ಧೆಗಳಿಂದ ಸ್ಫೂರ್ತಿ ಪಡೆದೆ, ನಾನು ಅಲ್ಲಿ ಬೇರೆಯವರ ಬರವಣಿಗೆ ಮತ್ತು ಪ್ರದರ್ಶನವನ್ನು ಆಲಿಸಿದೆ. ಅದಕ್ಕೆ ಮುನ್ನ, "ಯಾವುದೇ ವಸ್ತುವಿನ ಬಗ್ಗೆ" ಕಾವ್ಯವನ್ನು ಬರೆಯಬಹುದು ಎಂಬುದು ನನಗೆ "ಸೈದ್ಧಾಂತಿಕವಾಗಿ" ಗೊತ್ತಿತ್ತು; ಆದರೆ ಕಾವ್ಯದ ಮೂಲಕ ಎಷ್ಟೊಂದು ವೈವಿಧ್ಯಮಯ ವಿಷಯಗಳ ಬಗ್ಗೆ ಕಾವ್ಯರಚನೆ ಮಾಡಬಹುದು ಎಂಬುದನ್ನು ನಾನು ಗುರುತಿಸಿರಲಿಲ್ಲ. ನಾನು ಮೊಟ್ಟಮೊದಲ ಬಾರಿಗೆ ಮುಕ್ತ ಕವನವಾಚನ ಕಾರ್ಯಕ್ರಮವೊಂದರಲ್ಲಿ ಓದಿದ ಪದ್ಯವು ರಸಾಯನವಿಜ್ಞಾನದ ಬಗ್ಗೆ ಆಗಿರಲಿಲ್ಲ.

ನಾನು ಅಮೆರಿಕದ ಕ್ಯಾಲಿಫೋರ್ನಿಯಾದ ಪ್ರೌಢಶಾಲೆಯೊಂದರಲ್ಲಿ ಕಲಿಸುತ್ತಿದ್ದ ಕೆಲವು ಅದ್ಭುತ ವಿದ್ಯಾರ್ಥಿಗಳಿಂದಾಗಿ ರಸಾಯನವಿಜ್ಞಾನದ ಬಗ್ಗೆ ಕವನಗಳನ್ನು ಬರೆಯಲು ಸ್ಫೂರ್ತಿ ಸಿಕ್ಕಿತು. ನಾನು ಅನೇಕ ಬಾರಿ ರಸಾಯನವಿಜ್ಞಾನವು ಅಣುಗಳ ಮಟ್ಟದಲ್ಲಿ ನಡೆಯುವ ಭಾವಾತಿರೇಕದ ನಾಟಕ ಎನ್ನುತ್ತಿದ್ದೆ(ಪರಮಾಣುಗಳು ಒಂದಾಗುವುದು, ವಿಚ್ಛೇದವಾಗುವುದು ಇತ್ಯಾದಿ). ವಿದ್ಯಾರ್ಥಿಗಳು ಅಂತಹ ನಾಟಕದೊಳಗೆ ಐಯಾನುಗಳ ಕಥೆಯನ್ನು ಹೇಳುವ ವರ್ಣಚಿತ್ರವೊಂದನ್ನು ರಚಿಸಿದರು, ಮತ್ತು ಅದು ನನ್ನನ್ನು ರಸಾಯನವಿಜ್ಞಾನದ ತಿಳವಳಿಕೆಯನ್ನು ಸಂವಹನ ಮಾಡಲು ಇನ್ನಿತರ ಸೃಜನಶೀಲ ಮಾರ್ಗಗಳ ಕುರಿತು ಯೋಚಿಸಲು ಪ್ರೇರೇಪಿಸಿತು.

ಆದ್ದರಿಂದ ನಾನು ಅಣುಗಳ ಮಟ್ಟದ ಭಾವಾತಿರೇಕದ ನಾಟಕವನ್ನು ಹೇಳುವ ಕವನವೊಂದನ್ನು ಬರೆದು ಒಂದು ಮುಕ್ತ ಕವನವಾಚನ ಕಾರ್ಯಕ್ರಮದಲ್ಲಿ ಓದಿದೆ. ಅಲ್ಲಿನ ಕೇಳುಗರು (ರಸಾಯನ–ವಿಜ್ಞಾನದವರಲ್ಲದವರು) ಅದನ್ನು ಬಹಳ ಇಷ್ಟಪಟ್ಟರು! ಹೀಗಾಗಿ ನಾನು ಇನ್ನೊಂದು ಕವನ, ಮತ್ತೊಂದು ಕವನ ಹೀಗೆ ಬರೆಯುತ್ತಾ ಪ್ರತಿವಾರ ಭಾಗವಹಿಸುತ್ತಾ ಹೋದೆ. ಕೇಳುಗರು ಅದಕ್ಕೆ ಯಾವಾಗಲೂ ಧನಾತ್ಮಕವಾಗಿ ಪ್ರತಿಕ್ರಯಿಸುತ್ತಿದ್ದರು (ಪನ್–ಶ್ಲೇಷೆಗಳ ಮೂಲಕ) ಮತ್ತು ಕೆಲವೊಮ್ಮೆ ಅವರು ಕವನಗಳ ಮೂಲಕ ತಾವೂ ಒಂದಿಷ್ಟು ರಸಾಯನವಿಜ್ಞಾನವನ್ನು ಕಲಿತೆವೆಂದು ಹೇಳುತ್ತಿದ್ದರು. ಅಂತಹ ಕವನಗಳಿಗೆ ಒಂದು ಶೈಕ್ಷಣಿಕ ಮೌಲ್ಯ ಇರಬಹುದೆಂದು ನನಗೆ ಮನವರಿಕೆಯಾಯಿತು, ಆದ್ದರಿಂದ ನಾನು ಆಕರ್ಷಕವಾದ ಕಥಾ ಸೂತ್ರಗಳನ್ನು ಮತ್ತು ಮನರಂಜನೆಯನ್ನು ಉಳಿಸಿಕೊಂಡೇ ನಿರ್ದಿಷ್ಟ ರಾಸಾಯನಿಕ ಪರಿಕಲ್ಪನೆಗಳನ್ನು ಸಂವಹನ ಮಾಡುವ ದೃಷ್ಟಿಯಿಂದಲೇ ಬರೆಯತೊಡಗಿದೆ. ಅಂತಿಮವಾಗಿ ನಾನು ಕಾವ್ಯದ ಕಾರ್ಯಕ್ರಮಗಳನ್ನು ಮಾಡಲಾರಂಭಿಸಿದೆ ಮತ್ತು ಕವನವಾಚನ ತಂಡವೊಂದರ ಭಾಗವಾದೆ. ಅದೊಂದು ಅದ್ಭುತ ಅನುಭವವಾಗಿತ್ತು ಮತ್ತು ಅಲ್ಲಿದ್ದ ಕವಿಗಳು ನನಗೆ ಸ್ಫೂರ್ತಿನೀಡಿದರು.

ಪ್ರಶ್ನೆ 4: ತಾವೂ ಕವನ ಬರೆಯಬೇಕು ಎಂದುಕೊಳ್ಳುವ ಓದುಗರಿಗೆ ಕಾವ್ಯ ರಚನೆಯಲ್ಲಿ ನೀವು ಉಪಯೋಗಿಸುವ ಪ್ರಕ್ರಿಯೆಯ ಬಗ್ಗೆ ಏನಾದರೂ ಹೇಳಬಹುದೇ?

ಮಾಲಾ: ಇದಕ್ಕೆ ನಾನು ಕೊಡಬಹುದಾದ ಉತ್ತರ ಭಿನ್ನಭಿನ್ನವಾಗಿರುತ್ತದೆ. ಕೆಲವೊಮ್ಮೆ ನನಗೆ ಉತ್ತಮ ಕಥಾ ಸೂತ್ರ ಸಿಕ್ಕಿಬಿಟ್ಟರೆ ಆಗ ಕವನವು ತನ್ನಷ್ಟಕ್ಕೆ ತಾನೇ ಬರೆಸಿಕೊಂಡು ಬಿಡುತ್ತದೆ. ಒಂದು ಉದ್ದೇಶಕ್ಕಾಗಿ ಎಂದು ಕವನವೊಂದನ್ನು ಬರೆಯಹೊರಟಾಗ ಅದಕ್ಕೆ ಹೆಚ್ಚು ಪ್ರಯತ್ನ ಬೇಕಾಗುತ್ತದೆ (ಎಂದರೆ ಒಂದು ಪರಿಕಲ್ಪನೆಯನ್ನು ಕಲಿಸಲು ಹೊರಟಾಗ) ಏಕೆಂದರೆ ಇಲ್ಲಿ ಅದು ತನ್ನಷ್ಟಕ್ಕೇ ಜೀವಂತವಾಗಿ ಹೊರಹೊಮ್ಮುವುದರ ಬದಲು, ಒಂದು ಉದ್ದೇಶದ ಸುತ್ತಲೂ ಕಥಾ ಸೂತ್ರವೊಂದನ್ನು ಹೆಣೆಯಬೇಕಾಗುತ್ತದೆ. ಉದಾಹರಣೆಗೆ ಕೆಲವೊಂದು ಕವನಗಳಲ್ಲಿ ನಾನು ಲಯದಂತಹ ಒಂದು ಕೌಶಲ್ಯವನ್ನು ಅಭಿವೃದ್ಧಿ–ಪಡಿಸುವತ್ತ ಗಮನಹರಿಸಲು ಯತ್ನಿಸುತ್ತೇನೆ. ಅಥವಾ ನಾನು ಒಳ್ಳೆಯ ಪ್ರಾಸದ ಬಗ್ಗೆ ಯೋಚಿಸಿ ಅದನ್ನು ಸುತ್ತುವರೆದಂತೆ ಕವನವೊಂದನ್ನು ರಚಿಸುತ್ತೇನೆ. ಉದಾಹರಣೆಗೆ ನನ್ನ ಪುಸ್ತಕ 'ಅಟಾಮಿಕ್ ರೊಮಾನ್ಸಸ್, ಮಾಲಿಕ್ಯುಲಾರ್ ಡಾನ್ಸಸ್'ನಲ್ಲಿ ಇರುವ ಪದ್ಯವೊಂದಕ್ಕೆ ಸ್ಫೂರ್ತಿ ದೊರೆತದ್ದು 'ಅನಾನಿಮಸ್' ಎಂಬ ಪದದೊಂದಿಗೆ ಆದಷ್ಟೂ ಸಂಗತಿಗಳನ್ನು ಪ್ರಾಸದಲ್ಲಿ ಜೋಡಿಸಲು ಯತ್ನಿಸಿದಾಗ. ಪ್ರಾಸಬದ್ಧ ಪದ್ಯವು ಪರಿಕಲ್ಪನೆಗಳಿಗೆ ಬಲ ನೀಡುತ್ತದೆ ಮತ್ತು ವಿಷಯವು "ಕೈಗೆಟಕುವಂತಾಗುತ್ತದೆ" ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ಕಾರಣವೇನೆಂದರೆ ನಾವು ಪ್ರಾಸಬದ್ಧ ಪದ್ಯವನ್ನು ನಮ್ಮ ಯೌವನದ ಹಾಡುಗಳು ಮತ್ತು ಕತೆಗಳೊಂದಿಗೆ ತಳಕು ಹಾಕಿಕೊಳ್ಳುತ್ತೇವೆ.

ದೀರ್ಘಕವನಗಳಿಗೆ/ರಚನೆಗೆ ಒಂದೆರಡು ಗಂಟೆಗಳ ಸಮಯ ಬೇಕಾಗಬಹುದು ಅಥವಾ ದಿನಗಳೇ ಅವಶ್ಯವಾಗಬಹುದು. ಆದರೆ ನಾನು ಯಾವಾಗಲೂ ಅದನ್ನು ಮತ್ತೆ ಮತ್ತೆ ತಿದ್ದುತ್ತೇನೆ ಮತ್ತು ಅನೇಕ ಬಾರಿ ಅದರಲ್ಲಿನ ಪದಗಳನ್ನು ಬದಲಾಯಿಸುತ್ತೇನೆ. ಇದಕ್ಕೆ ತದ್ವಿರುದ್ಧವಾಗಿ ದ್ವಿಪದಿಗಳು (ಎರಡೇ ಸಾಲಿನ ಪದ್ಯಗಳು) ಬಹುತೇಕ ಬಾರಿ ತನ್ನಿಂದ ತಾನೇ ಹುಟ್ಟಿಕೊಳ್ಳುತ್ತವೆ. ದ್ವಿಪದಿಗಳ ಒಂದು ಅಂಶವೇನೆಂದರೆ ಅವು ಯಾರೇ ಆಗಲೀ ಕವಿಯಾಗಬಹುದು ಎಂಬುದನ್ನು ತೋರಿಸುತ್ತವೆ. ವಾಸ್ತವವಾಗಿ ನಾನು ಮುಖ್ಯವಾಗಿ ಚಿಕ್ಕದಾದ ದ್ವಿಪದಿಗಳನ್ನು ರಚಿಸಲು ಹೊರಳಿಕೊಂಡದ್ದಕ್ಕೆ ಭಾಗಶಃ ಕಾರಣವೇನೆಂದರೆ, ಇತ್ತೀಚೆಗೆ ನನ್ನ ಬದುಕಿನಲ್ಲಿ ನಾನು ಎಷ್ಟರಮಟ್ಟಿಗೆ ಮುಳುಗಿ ಹೋಗಿದ್ದೇನೆ ಎಂದರೆ, ನನಗೆ ಒಂದೆಡೆ ಕುಳಿತು ದೀರ್ಘವಾದ ಪದ್ಯವೊಂದನ್ನು ಬರೆಯಲು ಸಮಯವೇ ಆಗುತ್ತಿಲ್ಲ. ನನಗಿರುವ ಸಮಯದಲ್ಲಿ ನನ್ನ ಮನಸ್ಸಿನ ಒಂದು ಭಾಗವನ್ನು ತೊಡಗಿಸುವುದಕ್ಕೆ ಇದೇ ನನ್ನ ದಾರಿಯಾಗಿದೆ.

ಪ್ರಶ್ನೆ 5: ನಿಮ್ಮ ಎರಡು ಕವನ ಸಂಕಲನಗಳ ಬಗ್ಗೆ ನೀವು ಕೊಂಚ ಹೇಳಬಹುದೇ?

ಮಾಲಾ: ನನ್ನ ಎರಡು ಕವನ ಸಂಕಲನಗಳು (ವಾಸ್ತವದಲ್ಲಿ ಒಂದೊಂದು ಸಂಕಲನವೂ ನನ್ನ ಒಂದೊಂದು ಮಗುವಿಗೆ ಅರ್ಪಿತವಾಗಿದೆ) ಒಂದಕ್ಕೊಂದು ಪೂರಕವಾಗಿವೆ.



ಮೇರಿ ಓ ರಿಲಿ, ಪರವಾನಗಿ-ಹಕ್ಕುಗಳನ್ನು ಹೊಂದಿದ ಮಾಲಕರ ಅನುಮತಿಯೊಂದಿಗೆ ಉಪಯೋಗಿಸಲಾಗಿದೆ.

ನನ್ನ ಮೊದಲ ಸಂಕಲನವು (ಅಟಾಮಿಕ್ ರೊಮಾನ್ಸಸ್, ಮಾಲಿಕ್ಯುಲಾರ್ ಡಾನ್ಸಸ್– ಪರಮಾಣ್ವಿಕ ಪ್ರಣಯಗಳು, ಅಣ್ವಿಕ ನೃತ್ಯಗಳು) ಹೆಚ್ಚು ಬೋಧನಾ ವಿಜ್ಞಾನವಾಗಿತ್ತು, ಎಂದರೆ ರಸಾಯನವಿಜ್ಞಾನದ ವಿಶಿಷ್ಟ ಪರಿಕಲ್ಪನೆಗಳನ್ನು ಕಲಿಸಲಿಕ್ಕಾಗಿ ನಾನು ಕೆಲವೊಂದು ನಿರ್ದಿಷ್ಟ ಕವನಗಳನ್ನು ರಚಿಸಿದ್ದೆ (ಸಾಮಾನ್ಯ ಐಯಾನ್ ಪರಿಣಾಮ, ಉಷ್ಣೀಯ ಚಲನವಿಜ್ಞಾನದ ಎರಡನೆಯ ನಿಯಮ ಇತ್ಯಾದಿ). ಅದರಲ್ಲಿರುವುದು, ಪರಮಾಣುಗಳು ಮತ್ತು ಅಣುಗಳು ತಮ್ಮ ಸ್ವಂತ ಅನುಭವದಿಂದ ಬಂದಂಥ ದೃಷ್ಟಿಕೋನದಿಂದ ರಾಸಾಯನಿಕ ಪರಿಕಲ್ಪನೆಗಳನ್ನು ಮತ್ತು ಪ್ರಕ್ರಿಯೆಗಳನ್ನು ವಿವರಿಸಲು ವ್ಯಕ್ತಿರೂಪದಲ್ಲಿ ಹೇಳಿಕೊಳ್ಳುವ ಕಥನ ಕವನಗಳು.

ಇದಕ್ಕಿಂತ ಭಿನ್ನವಾಗಿ ನನ್ನ ಎರಡನೆಯ ಸಂಕಲನವು (ಆವರ್ತಕ ಕೋಷ್ಟಕವಾಗಿ ಚಿಂತಿಸುವುದು) ಹೆಚ್ಚು ವಿನೋದಶೀಲ ಲಹರಿಯಲ್ಲಿವೆ. ದೈನಂದಿನ ಬದುಕಿನಲ್ಲಿ "ತನ್ನಷ್ಟಕ್ಕೇ" ಹುಟ್ಟಿಕೊಂಡ ಆಲೋಚನೆಗಳನ್ನು (ಎಳೆಯ ಮಕ್ಕಳ ಉದ್ಯೋಗಸ್ಥ ತಾಯಿಯಾಗಿ) ರಸಾಯನ ವಿಜ್ಞಾನದ ಪರಿಭಾಷೆಯಲ್ಲಿ ಅಭಿವ್ಯಕ್ತಿಸಲು ಬರೆದದ್ದು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ದೈನಂದಿನ ಬದುಕನ್ನು ವಿವರಿಸಲು ರಸಾಯನವಿಜ್ಞಾನದ ಭಾಷೆಯನ್ನು ಉಪಯೋಗಿಸಿಕೊಂಡಿದ್ದೆ. ತರಗತಿಯ ಅಂತಿಮ ಘಟ್ಟವನ್ನು ಒಂದು "ರೋಚಕ ಘಳಿಗೆ"ಯನ್ನಾಗಿ ಮಾಡಬಲ್ಲ ಮತ್ತು ಶಿಕ್ಷಕರಿಗೆ ಬೆಲೆಬಾಳುವ ಸಂಪನ್ಮೂಲವಾಗಬಲ್ಲ ಬಿಡಿಬಿಡಿಯಾದ ಪ್ರಾಸಬದ್ಧ ದ್ವಿಪದಿಗಳು ಈ ಸಂಕಲನದಲ್ಲಿವೆ.

ಈ ರೀತಿಯಲ್ಲಿ ಈ ಎರಡೂ ಸಂಕಲನಗಳೂ ದೈನಂದಿನ ಜಗತ್ತು ಮತ್ತು ರಾಸಾಯನಿಕ ಜಗತ್ತಿನ ನಡುವೆ ಸೇತುವೆಗಳಾಗುತ್ತವೆ. ಆದರೆ ಅವು ಈ ಉದ್ದೇಶವನ್ನು ಎರಡು ವಿರುದ್ಧ ದಿಕ್ಕುಗಳಲ್ಲಿ ಸಾಗುತ್ತಾ ಸಾಧಿಸುತ್ತವೆ.

ಪ್ರಶ್ನೆ 6: ರಾಸಾಯನಿಕಗಳನ್ನು ಮಾನವೀಕರಿಸುವುದು ಮತ್ತು ಅವುಗಳಿಗೆ ವ್ಯಕ್ತಿತ್ವವನ್ನು ಆರೋಪಿಸುವುದರ ಮೂಲಕ ನಿಮ್ಮ ಕವನಗಳು ಮನಸ್ಸಿಗೆ ತಟ್ಟುತ್ತವೆ ಮತ್ತು ಆಸಕ್ತಿದಾಯಕವಾಗುತ್ತವೆ. ನಿಮ್ಮ ಈ ಮಾರ್ಗದಲ್ಲಿ ಏನಾದರೂ ಸವಾಲುಗಳು ಅಥವಾ ಇತಿಮಿತಿಗಳು ಇದಿರಾಗುತ್ತವೆಯೇ?

ಮಾಲಾ: ವ್ಯಕ್ತಿರೂಪವನ್ನು ನೀಡುವುದರಿಂದ ಜನರಿಗೆ ತಮ್ಮ ಚಿರಪರಿಚಿತ ದೈನಂದಿನ ಬದುಕನ್ನು "ಅಪರಿಚಿತ" ಅಣುಲೋಕದೊಂದಿಗೆ ಹೊಂದಿಸಿ–ಕೊಳ್ಳಲು ನೆರವಾಗಬಹುದು. ಅಪರಿಚಿತವಾದ ಪರಿಭಾಷೆಯ ಅಡ್ಡಗೋಡೆಯನ್ನು ಮೀರಲು ಸಹ ಅದು ನೆರವಾಗಬಹುದು. ಇದಿರಾಗುವ ಒಂದು ಸವಾಲೆಂದರೆ, ನಾನು ಕಾವ್ಯಾತ್ಮಕ ಸ್ವಾತಂತ್ರ್ಯವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ–ಎಂದರೆ ನಿಜಕ್ಕೂ ಅಣುಗಳು ಕವನವು ಹೇಳುವ ರೀತಿಯಲ್ಲಿ "ಮಾತುಗಳನ್ನು" ಆಡುವುದಿಲ್ಲ, ಭಾವನೆಗಳನ್ನು ಹೊಂದಿರುವುದಿಲ್ಲ. ಆದರೂ ಇದು ಕಥನ ಕವನದ ಇನ್ನೊಂದು ಮಾದರಿ ಎಂದು ನಾವು ಪರಿಭಾವಿಸಬಹುದು. 'ಲೂಯಿ ಸಂರಚನೆ'ಯಂತೆ ಅಥವಾ ಒಂದು 'ಸಮತೋಲನಿತ ರಾಸಾಯನಿಕ ಸಮೀಕರಣ'ದಂತೆ ಇದಕ್ಕೂ ಸಹ ಏನನ್ನು ಪ್ರತಿನಿಧಿಸಬಹುದು ಮತ್ತು ಹೇಗೆ ಪ್ರತಿನಿಧಿಸಬಹುದು ಎಂಬುದರ ಬಗ್ಗೆ ತನ್ನದೇ ಆದ ಇತಿಮಿತಿಗಳಿರುತ್ತವೆ. ಆದ್ದರಿಂದಾಗಿ ಮಾಹಿತಿಯನ್ನು ನೀಡಲು ಉಪಯೋಗಿಸುವ ಮಾದರಿಗಳು, ಉದಾಹರಣೆಗಳು ಮತ್ತು ಇನ್ನಿತರ ಸಂರಚನೆಗಳು ಇವುಗಳ ಇತಿಮಿತಿಗಳ ಬಗ್ಗೆ ಚರ್ಚಿಸುವುದು ಮುಖ್ಯವಾಗುತ್ತದೆ. ಆದರೂ ಈ ವಿಭಿನ್ನ ಪ್ರತಿನಿಧೀಕರಣಗಳು ಒಂದಕ್ಕೊಂದು ಪೂರಕವಾಗಿವೆ ಮತ್ತು ಇವುಗಳನ್ನು ಒಂದರ ಜೊತೆಯಾಗಿ ಇನ್ನೊಂದನ್ನು ಉಪಯೋಗಿಸಿದಾಗ ವಿದ್ಯಾರ್ಥಿಗೆ ಉತ್ತಮವಾದ, ಹೆಚ್ಚು ಏಕೀಕೃತವಾದ ರಸಾಯನವಿಜ್ಞಾನದ ತಿಳುವಳಿಕೆ ಸಿಗುತ್ತದೆ.

ಇನ್ನೊಂದು ಸವಾಲೆಂದರೆ ನಾವು ವ್ಯಕ್ತೀಕರಣ–ವನ್ನಾಗಲೀ, ಪಾಪ್ ಸಂಸ್ಕೃತಿಯನ್ನಾಗಲೀ (ಜನಪ್ರಿಯ ವಿಧಾನಗಳು) ಅಥವಾ ಇನ್ನಿತರ ಮನುಷ್ಯ ಸಂಬಂಧಿ ತಂತ್ರಗಳನ್ನಾಗಲೀ ಸಂವಹನಕ್ಕಾಗಿ ಉಪಯೋಗಿಸಿದಾಗ ಅದು ಎಲ್ಲರಿಗೂ ಒಪ್ಪಿಗೆಯಾಗುವುದಿಲ್ಲ, ಬದಲಿಗೆ ಅದು ಕೆಲವರಲ್ಲಿ ಅಹಿತಕಾರಿ ಭಾವನೆಯನ್ನು ಉಂಟುಮಾಡುತ್ತದೆ. ಉದಾಹರಣೆಗೆ ನನ್ನ ಮೊದಲ ಕವನ ಸಂಕಲನದಲ್ಲಿ ನಾನು ಉಪಯೋಗಿಸಿಕೊಂಡ ಕೆಲವು ವಸ್ತು ವಿಷಯಗಳು ವಯಸ್ಕ ಕೇಳುಗರಿಗೆ ಮಾತ್ರ ಸಮರ್ಪಕವಾಗಬಹುದು (ಪರಿವಿಡಿಯಲ್ಲಿ ಸೂಚಿಸಿರುವಂತೆ). ಇನ್ನೂ ಕೆಲವು ಕವನಗಳಲ್ಲಿ ಕೆಲವೊಂದು ನಿರ್ದಿಷ್ಟ ಉಲ್ಲೇಖಗಳಿರುತ್ತವೆ; ಉದಾಹರಣೆಗೆ ಅಲ್ಲಿ ಹೆಸರಿಸಿರುವ ಯಾವುದೋ ಒಂದು ಟಿವಿ ಕಾರ್ಯಕ್ರಮವು ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಅಥವಾ ಜಗತ್ತಿನ ಯಾವುದೋ ನಿರ್ದಿಷ್ಟ ಭೂಭಾಗಕ್ಕೆ ಮಾತ್ರ ಪರಿಚಯವಿರು–ವಂಥದ್ದಿರಬಹುದು. ಒಂದು ವಿಶಾಲ ಪ್ರೇಕ್ಷಕ ವೃಂದದ ಮನಸ್ಸನ್ನು ಸೆಳೆಯುವಂಥ, ಕಲಿಕೆಯ ದೃಷ್ಟಿಯಿಂದ ಪರಿಣಾಮಕಾರಿಯಾಗಬಲ್ಲ ಉದಾಹರಣೆಗಳನ್ನು, ಸಂಕಥನಗಳನ್ನು ಹುಡುಕುವುದು ಕಷ್ಟವಾಗಬಹುದು. ಇದನ್ನು ಅರ್ಥಮಾಡಿಕೊಂಡು ನಮ್ಮ ಕವನವನ್ನು ಎಲ್ಲರನ್ನೂ ಒಳಗೊಳ್ಳಲಿಕ್ಕಾಗಿ ಮತ್ತು ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ವಿಕಸಿಸುತ್ತಾ ಮುಂದು–ವರೆಯುವುದು ಮುಖ್ಯ ಎಂದು ನನಗನ್ನಿಸುತ್ತದೆ.

ಪ್ರಶ್ನೆ 7: ಕಲೆ ಮತ್ತು ವಿಜ್ಞಾನಗಳ ಹೊಂದಿಸುವಿಕೆಯನ್ನು ತಾವು ಹೇಗೆ ಕಾಣುತ್ತೀರಿ? ಉದಾಹರಣೆಗೆ ವಿಜ್ಞಾನದಲ್ಲಿ ಮತ್ತು ಕಲೆಯಲ್ಲಿ ವಾಸ್ತವಾಂಶಗಳು, ವಿಸ್ಮಯ, ಗಾಢ ಭಾವಪೂರ್ಣ ಆಸಕ್ತಿ, ಸೌಂದರ್ಯ, ರೂಪಕ ಇವೆಲ್ಲವೂ ವಿಭಿನ್ನ ಅರ್ಥಗಳನ್ನು ಪಡೆದುಕೊಳ್ಳುತ್ತವೆಯೇ?

ಮಾಲಾ: ಜನರು ಗುರುತಿಸುವುದಕ್ಕಿಂತ ಹೆಚ್ಚಾಗಿ ವಿಜ್ಞಾನ ಮತ್ತು ಕಲೆಗಳು ಹೆಚ್ಚು ಒಂದು ಇನ್ನೊಂದನ್ನು ಹೋಲುತ್ತವೆ ಎಂದು ನನಗನ್ನಿಸುತ್ತದೆ. ಎರಡೂ ಸಹ, ಜಗತ್ತನ್ನು ಮತ್ತು

ಅದರೊಂದಿಗಿನ ನಮ್ಮ ಸಂಬಂಧವನ್ನು ಅರ್ಥಮಾಡಿಕೊಳ್ಳಲಿಕ್ಕಾಗಿಯೇ ಜನರು ಸೃಷ್ಟಿಸಿದ ಕಲ್ಪನೆಗಳನ್ನು ಉಪಯೋಗಿಸಿಕೊಳ್ಳುತ್ತವೆ. ವಿಜ್ಞಾನದಲ್ಲಿ ಅಂತಹ ಸಂರಚನೆಗಳನ್ನು ಮಾದರಿಗಳು ಎಂದು ಕರೆಯುತ್ತಾರೆ. ಆದರೆ ತತ್ವಶಾಸ್ತ್ರೀಯ ಅರ್ಥದಲ್ಲಿ ಅವುಗಳು ವಾಸ್ತವವಾದಿ ಸಾಹಿತ್ಯಕ್ಕಿಂತ (ಅಥವಾ ವೈಜ್ಞಾನಿಕ ಸಾಹಿತ್ಯಕ್ಕಿಂತ ಸಹ) ಅಷ್ಟೇನೂ ಭಿನ್ನವಲ್ಲ. ಮನುಷ್ಯರು ಯಾವುದರ ಬಗ್ಗೆಯೇ ಆಗಲಿ, ಉದಾಹರಣೆಗೆ ಒಂದು ಸಾಂಕ್ರಾಮಿಕದ ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬ ಬಗ್ಗೆ ವಿಭಿನ್ನವಾಗಿ ಚಿಂತಿಸುವಂತೆ ಮಾಡಲಿಕ್ಕಾಗಿಯೇ ಇರುವಂಥವು.

ಸ್ಪಷ್ಟವಾಗಿಯೇ ಎರಡೂ ಮಾರ್ಗಗಳ ನಡುವೆ ವ್ಯತ್ಯಾಸಗಳಿವೆ. ಕಲೆಯಲ್ಲಿ ಪ್ರಕ್ರಿಯೆಯ ಬಗ್ಗೆ, ಕಲಾವಿದನ ಉದ್ದೇಶದ ಬಗ್ಗೆ ಮತ್ತು ಕೃತಿಯೊಂದಿಗಿನ ಕಲಾವಿದನ ಸಂಬಂಧದ ಬಗ್ಗೆ ಹೆಚ್ಚಾಗಿ ಗಮನವನ್ನು ಕೇಂದ್ರೀಕರಿಸಲಾಗುತ್ತದೆ. ವಿಷಾದದ ಸಂಗತಿಯೆಂದರೆ ಪ್ರಕಟಣೆಗಳನ್ನು, ಕ್ರಿಯೆ ಮಾತ್ರ ಮುಖ್ಯ ಕರ್ತೃವಲ್ಲ ಎಂಬಂತೆ ಕರ್ಮಣೀ ಪ್ರಯೋಗದಲ್ಲಿ ಬರೆಯುವುದು ಮತ್ತು ಇಡೀ ಪ್ರಕ್ರಿಯೆಯನ್ನು ಕೇವಲ ಊಹಾ ಪ್ರಜ್ಞೆಯಿಂದ ಫಲಿತಾಂಶಕ್ಕೆ ಧಾವಿಸುವ "ಕನಿಷ್ಟ ಅವಶ್ಯಕ ಮಾರ್ಗ" ಎಂಬಂತೆ ವರ್ತಿಸುವುದು, ಹೀಗೆ ವಿಜ್ಞಾನವನ್ನು ಅಮಾನವೀಕರಣಕ್ಕೊಳಗಾಗಿಸಲಾಗಿದೆ. "ಮರು ಉತ್ಪಾದನೆ" ಮಾಡಬಹುದಾದ ಮಾರ್ಗ, ಫಲಿತಾಂಶಗಳು, ಅಂತಿಮ ಉತ್ಪನ್ನಗಳು ಇವೆಲ್ಲಾ ಖಂಡಿತವಾಗಿಯೂ ಕಲೆಯಲ್ಲೂ, ವಿಜ್ಞಾನದಲ್ಲೂ ಮುಖ್ಯವೇ. ಆದರೆ, ವ್ಯಕ್ತಿನಿಷ್ಠ ಪ್ರಕ್ರಿಯೆಗಳು ಮತ್ತು ವ್ಯಾಖ್ಯಾನಗಳಿಗೆ ಹೆಚ್ಚಿನ ಗಮನ ನೀಡಿದರೆ ಆಗ ಕೆಲವೊಂದು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ನೆರವಾಗುತ್ತದೆ; ಉದಾ: ನಾನು ಮತ್ತು ನೀವು ಒಂದೇ ದತ್ತಾಂಶಗಳನ್ನು ಗಮನಿಸಿಯೂ ವಿಭಿನ್ನ ತೀರ್ಮಾನಗಳಿಗೆ ಬರುವುದು ಸಾಧ್ಯ ವೆಂಬುದು. ಮತ್ತು ಈ ಎರಡೂ ತೀರ್ಮಾನಗಳೂ ವಿಭಿನ್ನ ಸನ್ನಿವೇಶಗಳಲ್ಲಿ ತರ್ಕಬದ್ಧವಾಗಿರಬಹುದು. ಜನಗಳು ಗುರುತಿಸುವುದಕ್ಕಿಂತ ಹೆಚ್ಚಿನ ವ್ಯಕ್ತಿನಿಷ್ಠತೆ ವಿಜ್ಞಾನದಲ್ಲಿದೆ. ಅದನ್ನು ಕೇವಲ ಮಾಹಿತಿಗಳು ಮತ್ತು ಪುನರುತ್ಪಾದಿಸಬಲ್ಲ ಪ್ರಕ್ರಿಯೆ ಎಂದು ಭಾವಿಸಿ, ಅದೊಂದು ಮುಂದುವರೆಯುತ್ತಿರುವ ಸಂವಾದ ಮತ್ತು ವಿಕಸನವಾಗುತ್ತಿರುವ ವ್ಯಕ್ತಿನಿಷ್ಠ ಪ್ರಕ್ರಿಯೆ ಎಂಬುದನ್ನು ಗಮನಿಸದೇ ಇದ್ದಾಗ ವಿಭಿನ್ನ ರೀತಿಯಲ್ಲಿ ಕೆಲಸ ಮಾಡುವವರಿಗೆ ಮತ್ತು ಸೃಜನಶೀಲವಾಗಿ ಕಾಣಿಕೆ ನೀಡಬೇಕೆಂದಿರುವವರಿಗೆ ಅದರಲ್ಲಿ ಉತ್ಸಾಹ ಕಡಿಮೆಯಾಗುತ್ತದೆ ಮತ್ತು ಅದು ಕಡಿಮೆ ಪರಿಣಾಮಕಾರಿಯಾಗುತ್ತದೆ. ಮತ್ತು ಪರಿಣಾಮವು ಗರಿಷ್ಠ ಮಟ್ಟಕ್ಕೇರಲು ವಿಜ್ಞಾನಕ್ಕೆ ಸೃಜನಶೀಲ ಜನ ಬೇಕು! ಉದಾಹರಣೆಗೆ, ವಿಸ್ಮಯ, ಭಾವತೀವ್ರ ಆಸಕ್ತಿ, ಸೌಂದರ್ಯ, ರೂಪಕ ಇವೆಲ್ಲವೂ ಯಾವುದೇ ಜ್ಞಾನಶಿಸ್ತಿಗೆ ಅಗತ್ಯವಿದ್ದಂತೆ ವಿಜ್ಞಾನಕ್ಕೂ ಅಗತ್ಯ . ಆದರೆ ವಿಜ್ಞಾನದಲ್ಲಿ ಅವುಗಳಿಗೆ ಅಂತಹ ಮನ್ನಣೆ ಸಿಕ್ಕಿಲ್ಲ. ಅನೇಕ ಜನರು ವಿಜ್ಞಾನವು ನೀರಸ ಎಂದು ಭಾವಿಸುವುದಕ್ಕೆ ಇದೂ ಸಹ ಒಂದು ಕಾರಣ.

ಪ್ರಶ್ನೆ 8: ವಿಜ್ಞಾನದ ಕಠಿಣ ಶಿಸ್ತು ಮತ್ತು ಕಾವ್ಯದ ಸೃಜನಶೀಲತೆ ಇವುಗಳನ್ನು ಸಮತೋಲನ-ದಲ್ಲಿರಿಸಿಕೊಳ್ಳಲು ಒಬ್ಬ ವಿಜ್ಞಾನಿ-ಕವಿಯ ಮನಸ್ಸಿನಲ್ಲಿ ಕೆಲವೊಂದು ಪರಿಗಣನೆಗಳನ್ನು ಇಟ್ಟುಕೊಳ್ಳ-ಬೇಕಾಗುತ್ತದೆಯೇ?

ಮಾಲಾ: ಇದು ವ್ಯಕ್ತಿಯ ಗುರಿಗಳ ಮೇಲೆ ಅವಲಂಬಿತವಾಗಿರುತ್ತದೆ. ತರಗತಿಯಲ್ಲಿ ರಾಸಾಯನಿಕ ಪರಿಕಲ್ಪನೆಗಳನ್ನು ಕಲಿಸುವ ಉದ್ದೇಶವನ್ನು ಹೊಂದಿರುವ ಕವನಗಳು, ಕಾವ್ಯಾತ್ಮಕ ಪರವಾನಗಿಯ ಮಿತಿಗಳಲ್ಲಿ ಎಷ್ಟು ನಿಖರವಾಗಿರಲಿಕ್ಕೆ ಸಾಧ್ಯವೋ ಅಷ್ಟರ ಮಟ್ಟಿಗೆ ಇರಬೇಕಾದದ್ದು ಮುಖ್ಯ ಎಂದು ನಾನು ಭಾವಿಸುತ್ತೇನೆ. (ಉದಾಹರಣೆಗೆ ಪರಮಾಣುಗಳು ಮತ್ತು ಅಣುಗಳು ಮಾತನಾಡುವುದು ಇತ್ಯಾದಿ). ಆದರೆ ಗುರಿಯು ಬೇರೆ ರೀತಿಗಳಲ್ಲಿ ವಿಚಾರಪ್ರಚೋದಕವಾಗಿರಬೇಕು ಅಥವಾ ಭಾವನೆಗಳನ್ನು ಸಂವಹಿಸಬೇಕು (ಕೆಲವೊಮ್ಮೆ ಅದೇ ಆಗಬೇಕಿರುತ್ತದೆ) ಎಂದಾಗ ನಾನು ನೂರಕ್ಕೆ ನೂರರಷ್ಟು ನಿಖರವಾಗಿರದ ಆದರೆ ಉದ್ದೇಶಿತ ಪರಿಣಾಮವನ್ನು ಸೃಷ್ಟಿಸಬಲ್ಲ ಪ್ರತಿಮೆಗಳನ್ನು ಬಳಸಿಕೊಳ್ಳುವ ವಿಧಾನವನ್ನು ಉಪಯೋಗಿಸಬಹುದು.

ಬೇರೆ ಬೇರೆ ಕವಿಗಳು ನಿರಂತರತೆಯ ವಿಭಿನ್ನ ಭಾಗಗಳಲ್ಲಿ ಇರುತ್ತಾರೆ ಎನಿಸುತ್ತದೆ ಮತ್ತು ಸೃಜನಶೀಲತೆ ಹಾಗೂ ನಿಖರತೆಗಳು ಪ್ರತ್ಯೇಕ ಗುಣಗಳು ಎಂದು ನನಗನ್ನಿಸುವುದಿಲ್ಲ. ಬದಲಿಗೆ ಕೆಲವೊಮ್ಮೆ ಏನನ್ನಾದರೂ ನಿಖರವಾಗಿ ಸಂವಹಿಸಲು ನೀವು ಸೃಜನಶೀಲರಾಗಿರಬೇಕಾಗುತ್ತದೆ. (ಉದಾಹರಣೆಗೆ, ಕ್ವಾಂಟಮ್ ಮೆಕಾನಿಕ್ಸ್).

ಪ್ರಶ್ನೆ 9: ನಿಮ್ಮ ಒಂದು ಲೇಖನದಲ್ಲಿ ನೀವು ಹೀಗೆಂದು ಹಂಚಿಕೊಂಡಿದ್ದೀರಿ. "ಎಲ್ಲಾ ವಿಜ್ಞಾನಿಗಳೂ ಸಹ ಸ್ವಲ್ಪ ಸಮಯವನ್ನು ವ್ಯಯ ಮಾಡಿ ಅವರ ವೈಯಕ್ತಿಕ ವಿಜ್ಞಾನ ಕಥೆಗಳನ್ನು ಕಾವ್ಯಾತ್ಮಕವಾಗಿ ಬರೆಯಲಿ ಮತ್ತು ಒಬ್ಬರು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಲಿ ಎಂದು ಕೇಳಿಕೊಳ್ಳುತ್ತೇನೆ; ಹೀಗಾದಾಗ ವಿಜ್ಞಾನವು ಒಂದು ಮಾನವೀಯ ಪ್ರಯತ್ನ ಎಂಬುದು ನಮಗೆ ಸತತವಾಗಿ ನೆನಪಿಗೆ ಬರುತ್ತಿರುತ್ತದೆ". ಇದನ್ನು ನೀವು ವಿಸ್ತರಿಸಿ ಹೇಳಬಹುದೇ?

ಮಾಲಾ: ಅಂತರ್ಗತವಾಗಿ ವೈಯಕ್ತಿಕವಾಗಿರು–ವುದರಿಂದಲೇ ಕಾವ್ಯವು ವಿಶೇಷವಾದದ್ದು. ಒಂದು ರಾಸಾಯನಿಕ ಕ್ರಿಯೆಯು ಹೇಗೆ ನಡೆಯುತ್ತಾ ಹೋಗುತ್ತದೆ ಎಂಬುದನ್ನು ಕುರಿತು ಪದ್ಯ ಬರೆಯಲು ಹೇಳಿದರೆ ನಿಮ್ಮ ಕವನವು ನಾನು ಬರೆದ ಪದ್ಯದಂತಿರುವುದಿಲ್ಲ, ಆದರೆ ನಮ್ಮಿಬ್ಬರ ಗದ್ಯರೂಪದ ವಿವರಣೆಗಳು ಪ್ರಾಯಶಃ ಒಂದು ಇನ್ನೊಂದನ್ನು ಹೋಲುತ್ತದೆ.

ಕಾವ್ಯವು, ವಿಜ್ಞಾನದೊಂದಿಗೆ ಅನುಸಂಧಾನ ಮಾಡಿಕೊಳ್ಳಲು ಪ್ರತಿಯೊಬ್ಬರಿಗೂ ಅವರಿಗೆ ಹಿತಕರವಾದ ಮಾರ್ಗವನ್ನು ನೀಡುತ್ತದೆ. ಅದು ನ್ಯಾಯನಿರ್ಣಯದ ಗೋಜಿಲ್ಲದೆ ಅವರ ಅನುಭವಗಳನ್ನೇ ಆಧರಿಸಿರುತ್ತದೆ. ಏಕೆಂದರೆ ಯಾವುದೇ ವಿಷಯದ ಕುರಿತು ಒಂದೇ ಒಂದು "ಸೂಕ್ತ" ಕವನ ಎಂಬುದಿರುವುದಿಲ್ಲ. ಅದು ಪ್ರತಿಯೊಬ್ಬರಿಗೂ ಒಂದು ಅನನ್ಯವಾದ ದನಿಯನ್ನು ನೀಡಬಲ್ಲದು ಮತ್ತು ನಮಗೆ ಪರಿಚಿತವಾದ ಪ್ರಮಾಣೀಕೃತ ವೈಜ್ಞಾನಿಕ ಬರವಣಿಗೆಗೆ ಪೂರಕವಾಗಬಲ್ಲದು.

ಪ್ರಶ್ನೆ 10: ನಮ್ಮ ಬಹುತೇಕ ಓದುಗರು ಶಾಲಾ ವಿಜ್ಞಾನ ಅಧ್ಯಾಪಕರಾಗಿದ್ದು, ಅವರು ರಸಾಯನವಿಜ್ಞಾನವನ್ನು ಕಲಿಸುವಾಗ ನಿಮ್ಮ ಕವನಗಳನ್ನು ಉಪಯೋಗಿಸಿಕೊಳ್ಳುತ್ತಾರೆ ಎಂದು ನಾವು ಆಶಿಸಿದ್ದೇವೆ. ಅವರಿಗಾಗಿ ನಿಮ್ಮ ಸಲಹೆಗಳೇನಾದರೂ ಇವೆಯೇ?

ಮಾಲಾ: ಕವನಗಳನ್ನು ಅಳವಡಿಸಿಕೊಳ್ಳಲು ಮತ್ತು ವಿದ್ಯಾರ್ಥಿಗಳು ತಮ್ಮದೇ ಆದ ಪದ್ಯಗಳನ್ನು ಬರೆಯುವಂತೆ ಪ್ರೇರೇಪಣೆ ನೀಡಲು ಅನೇಕ ಮಾರ್ಗಗಳಿವೆ. ನಾನು ಹೆಚ್ಚು ಕಡಿಮೆ ನನ್ನ ಎಲ್ಲಾ ತರಗತಿಗಳಲ್ಲೂ ನನ್ನ ಕಾವ್ಯವನ್ನು ಉಪಯೋಗಿಸಿಕೊಳ್ಳುತ್ತೇನೆ ಮತ್ತು ಬಹುತೇಕ ಎಲ್ಲಾ ವಿದ್ಯಾರ್ಥಿಗಳು ಸಹ ಪರಿಕಲ್ಪನೆಗಳೊಂದಿಗೆ ತೊಡಗಿಸಿಕೊಳ್ಳಲು ಇದು ಇನ್ನೊಂದು ನೆರವಾಗುವಂಥ ಮಾರ್ಗ ಎಂದುಕೊಳ್ಳುತ್ತಾರೆ. ನಾನು ಸೃಜನಶೀಲ ಕೆಲಸಗಳನ್ನು ಕೊಟ್ಟಾಗ ಅನೇಕ ಬಾರಿ ವಿದ್ಯಾರ್ಥಿಗಳು ಪ್ರಭಾವಶಾಲಿ ಕವನಗಳನ್ನು ಬರೆದಿದ್ದಾರೆ. ಅದೇ ರೀತಿ ಕೇವಲ ಪದ್ಯಗಳನ್ನು ಓದುವ ಶಿಕ್ಷಕರು, ಕವನದಲ್ಲಿ ಇರುವ ಕಥೆಯನ್ನು ಕುರಿತು ಚಿತ್ರ ಅಥವಾ ಭಿತ್ತಿಪತ್ರವನ್ನು ಬಿಡಿಸಲು ಹೇಳುವವರು, ಇವರನ್ನೆಲ್ಲಾ ನಾನು ಬಲ್ಲೆ. ಅಥವಾ ಒಂದು ಪದ್ಯವನ್ನು ಆಧರಿಸಿ ಸಾಂಖ್ಯಿಕ ಅಥವಾ ಪರಿಕಲ್ಪನಾತ್ಮಕ ಸಮಸ್ಯೆಯನ್ನು ಪರಿಹರಿಸುವ ವಿದ್ಯಾರ್ಥಿಗಳನ್ನೂ ನಾನು ನೋಡಿದ್ದೇನೆ.

ಶಿಕ್ಷಕರಿಗೆ ನನ್ನ ಸಲಹೆಯೇನೆಂದರೆ, ಒಂದು ರಾಸಾಯನಿಕ ಪರಿಕಲ್ಪನೆ ಅಥವಾ ಪ್ರಕ್ರಿಯೆಯ ಬಗ್ಗೆ ಕವನಗಳನ್ನು ಬರೆಯಲು ವಿದ್ಯಾರ್ಥಿಗಳನ್ನು ಉತ್ತೇಜಿಸಿ ಎಂದು. ತಮ್ಮ ವಿದ್ಯಾರ್ಥಿಗಳು ಏನೆಲ್ಲಾ ಮಾಡಬಹುದು ಎಂಬುದರ ಬಗ್ಗೆ ಅವರಿಗೇ ಅಚ್ಚರಿಯಾದೀತು. ವಿದ್ಯಾರ್ಥಿಗಳ ಕವನಗಳು ಅವರ ತಿಳುವಳಿಕೆಯ ಬಗ್ಗೆ ಆಸಕ್ತಿದಾಯಕ ಒಳನೋಟಗಳನ್ನು ಒದಗಿಸಬಹುದು ಮತ್ತು ಅದೇ

ಸಮಯದಲ್ಲಿ ಖುಷಿಯಿಂದ ವಿಜ್ಞಾನದೊಂದಿಗೆ ತೊಡಗಿಸಿಕೊಳ್ಳಲು ಹಾದಿಯಾಗಬಹುದು. ಕೆಲವೊಮ್ಮೆ ಸಾಂಪ್ರದಾಯಿಕ ಮೌಲ್ಯಮಾಪನದಲ್ಲಿ ಶಿಕ್ಷಕರ ಅರಿವಿಗೆ ಬಾರದಿದ್ದ ವಿದ್ಯಾರ್ಥಿಗಳ ತಪ್ಪುಗ್ರಹಿಕೆಗಳ ಬಗ್ಗೆ ಸಹ ಅದು ಶಿಕ್ಷಕರಿಗೆ ಒಳನೋಟಗಳನ್ನು ನೀಡಬಹುದು.

ಪ್ರಶ್ನೆ 11: ನಮ್ಮ ಓದುಗರಿಗೆ ನೀವು ನೀಡಬಹುದಾದ ಅಂತಿಮ ಆಲೋಚನೆಗಳು?

ಮಾಲಾ: ಅನೇಕ ಬಾರಿ ನಾವು ವಿಜ್ಞಾನ ಎಂದರೆ ಅದು ನಮ್ಮ ಹೊರಗಿರುವ 'ಮಾಹಿತ'ಗಳ ಕಂತೆ ಎಂದು ಭಾವಿಸುತ್ತೇವೆ. ಆದರೆ ಜಗತ್ತನ್ನು ಕುರಿತು ನಾವು ಚಿಂತಿಸುವ ರೀತಿಯ ಮಾದರಿಗಳನ್ನು ರೂಪಿಸಿದವರು ಕೆಲವು ಜನರಾಗಿದ್ದು, ವಿಭಿನ್ನ ಜನರು ಅದರಲ್ಲಿ ಭಾಗವಹಿಸಿದ್ದರೆ ಅದು ಬೇರೆಯ ರೀತಿಯಲ್ಲೇ ಇರುತ್ತಿತ್ತೇನೋ. ಇದರ ಅರ್ಥವೇನೆಂದರೆ ನಿಮ್ಮ ದೃಷ್ಟಿಕೋನದಿಂದಾಗಿ ನೀವು ವಿಜ್ಞಾನಕ್ಕೆ ಒಬ್ಬ ಅನನ್ಯ ಕೊಡುಗೆದಾರರಾಗಿರುತ್ತೀರಿ. ಆದ್ದರಿಂದ ವಿಜ್ಞಾನಿಯಾಗಿ ಸೃಜನಶೀಲರಾಗಿರಿ ಮತ್ತು ವಿಜ್ಞಾನವನ್ನು ಸಂವಹಿಸಲು "ಸಾಂಪ್ರದಾಯಿಕ" ಮಾರ್ಗಗಳ ಜೊತೆಯಲ್ಲಿ ನಿಮಗೆ ಯಶಸ್ವಿಯಾಗ-ಬಹುದಾದ ಹಾದಿಗಳನ್ನು ಹುಡುಕಿಕೊಳ್ಳಿ–ಹಾಗೆ ಮಾಡುವಾಗ ಇತರರು ಜಗತ್ತನ್ನು ಹೊಸ ಮಾರ್ಗದಲ್ಲಿ ಅರ್ಥಮಾಡಿಕೊಳ್ಳಲು ನೀವು ಸ್ಫೂರ್ತಿಯಾಗಬಹುದು!

ಚಿತ್ರಕೃಪೆ:
1. ಸೊಹಿಲ್ ಪರೇಖ್. ಪರವಾನಗಿ ಹಕ್ಕನ್ನು ಹೊಂದಿದ ಮಾಲಕರ ಅನುಮತಿಯೊಂದಿಗೆ ಉಪಯೋಗಿಸಿಕೊಳ್ಳಲಾಗಿದೆ.
2. ಮೇರಿ ಓ ರಿಲಿ, ಪರವಾನಗಿ–ಹಕ್ಕುಗಳನ್ನು ಹೊಂದಿದ ಮಾಲಕರ ಅನುಮತಿಯೊಂದಿಗೆ ಉಪಯೋಗಿಸಲಾಗಿದೆ.

ಟಿಪ್ಪಣಿಗಳು:
1. ಮಾಲಾ ರಾಧಾಕೃಷ್ಣನ್‌ರವರ ಕವನಗಳಿಂದ ಆಯ್ದದ್ದನ್ನು ನೀವು ಇಲ್ಲಿ ಕಾಣಬಹುದು: https://oreillyscienceart.com/chemistry-poetry.
2. ಮಾಲಾ ರಾಧಾಕೃಷ್ಣನ್‌ರವರನ್ನು ಸಂಪರ್ಕಿಸಲು ಇಚ್ಛಿಸುವ ಶಿಕ್ಷಕರು ಅವರನ್ನು ಕೆಳಕಂಡಲ್ಲಿ ಸಂಪರ್ಕಿಸಬಹುದು: mradhakr@wellesley.edu.
3. ಸಂದರ್ಶನಕ್ಕಾಗಿ ಪ್ರಶ್ನೆಗಳನ್ನು ಸಿದ್ಧಪಡಿಸಿದವರು ರಾಧಾಗೋಪಾಲನ್ ಮತ್ತು ಚಿತ್ರಾ ರವಿ (ಸಂಪಾದಕರು, 'ಐ ವಂಡರ್').
4. ಲೇಖನದ ಶೀರ್ಷಿಕೆಯಲ್ಲಿ ಹಿನ್ನಲೆಯಲ್ಲಿ ಉಪಯೋಗಿಸಿರುವ ಚಿತ್ರದ ಮೂಲ: ಕೆಮಿಸ್ಟ್ರಿ ಲ್ಯಾಬ್.

URL: https://pixnio.com/science/chemistry/science-laboratory-bottles-chemicals-chemistry. ಪರವಾನಗಿ: CCO

ಅನುವಾದ: **ಎಚ್. ಜಿ. ಜಯಲಕ್ಷ್ಮಿ** | ಪರಿಶೀಲನೆ: **ಸ್ಮಿತಾ ಭಟ್**